**Udayavani, Bangalore, August 06, 2010**

## ಟಿಸಿಎಸ್ ರಸ ಪ್ರಶ್ನೆ

# ಅಂತಿಮ ಸುತ್ತಿಗೆ ಬೆಂಗಳೂರಿನ ವಿದ್ಯಾರ್ಥಿಗಳು



ಟಾಟಾ ಕನ್ಸಲ್‌ಟೆನ್ಸಿ ಗುರುವಾರ ಬೆಂಗಳೂರಿನಲ್ಲಿ ಆಯೋಜಿಸಿದ್ದ ಐಟಿ ರಸಪ್ರಶ್ನೆಯಲ್ಲಿ ವಿಜೇತರಾದ ಭಗವಾನ್ ಮಹಾವೀರ ಕಾಲೇಜ್‌ನ ರಾಧಿಕಾ ಕೃಷ್ಣನ್ ಮತ್ತು ಉದ್ಭವ್ ತಿವಾರಿ ತಂಡ ಸಂಭ್ರಮಿಸಿದ್ದು ಹೀಗೆ.

ಬೆಂಗಳೂರು, ಆ. 5: 'ಟಿಸಿಎಸ್ ಐಟಿ ವಿಝ್-10' ಕರ್ನಾಟಕ ವಲಯದ ಪ್ರಾದೇಶಿಕ ರಸಪ್ರಶ್ನೆ ಸ್ಪರ್ಧೆಯಲ್ಲಿ ನಗರದ ಶ್ರೀ ಭಗವಾನ್ ಜೈನ್ ಮಹಾವೀರ ಪದವಿಪೂರ್ವ ಕಾಲೇಜು ಹಾಗೂ ವಿ.ವಿ. ಪುರಂ ವಿದ್ಯಾರ್ಥಿಗಳಾದ ಉದ್ಭವ್ ತಿವಾರಿ ಹಾಗೂ ರಾಧಿಕಾ ರಾಧಾಕೃಷ್ಣನ್ ವಿಜೇತರಾಗಿದ್ದಾರೆ.

ಈ ಮೂಲಕ ಇವರಿಬ್ಬರೂ ಡಿಸೆಂಬರ್‌ನಲ್ಲಿ ನಡೆಯಲಿರುವ 'ಟಿಸಿಎಸ್ ಐಟಿ ವಿಝ್ ರಾಷ್ಟ್ರೀಯ ಚಾಂಪಿಯನ್‌ಶಿಪ್' ಅಂತಿಮ ಸುತ್ತಿನ ಸ್ಪರ್ಧೆಗೆ ಪ್ರವೇಶ ಪಡೆದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ದೇಶಾದ್ಯಂತ 12 ಪ್ರಾದೇಶಿಕ ವಲಯದ ಸ್ಪರ್ಧೆಗಳಲ್ಲಿ ವಿಜೇತರಾಗಿರುವ ಎಲ್ಲ ತಂಡಗಳೂ ಭಾಗವಹಿಸಲಿವೆ ಎಂಬುದು ವಿಶೇಷ.

ಕರ್ನಾಟಕ ವಲಯದ ಈ ಸ್ಪರ್ಧೆಯ ರನ್ನರ್ ಅಪ್‌ಗಳಾಗಿ ಕುಮಾರನ್ಸ್ ಚಿಲ್ಡ್ರನ್ಸ್ ಹೋಮ್ ಸಂಸ್ಥೆಯ ಮಿಲನ್ ಹೆಗಡೆ ಮತ್ತು ವಿಕಾಸ್ ಕಶ್ಯಪ್ ಆಯ್ಕೆಯಾದರು. ವಿಜೇತ ಸ್ಪರ್ಧಿಗಳಿಗೆ ಲ್ಯಾಪ್‌ಟಾಪ್ ಮತ್ತು ವಿನ್ನರ್ಸ್ ಟ್ರೋಫಿ ಹಾಗೂ ರನ್ನರ್ ಅಪ್ ತಂಡಕ್ಕೆ ಬಹುಮಾನವಾಗಿ ಮಿನಿ ಲ್ಯಾಪ್‌ಟಾಪ್ ಮತ್ತು ಟ್ರೋಫಿ ವಿತರಿಸಲಾಯಿತು.

ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ವತಿಯಿಂದ ಆಯೋಜಿಸಿದ್ದ ಈ ಸ್ಪರ್ಧೆ ದೇಶಾದ್ಯಂತ 12 ವಲಯಗಳಲ್ಲಿ ನಡೆದಿದ್ದು, ರಾಷ್ಟ್ರಮಟ್ಟದಲ್ಲಿ ನಡೆಯುವ ಅಂತಿಮ ಸುತ್ತಿನ ಸ್ಪರ್ಧೆಗೆ ಎಲ್ಲ 12 ವಲಯಗಳಿಂದಲೂ ವಿಜೇತ ತಂಡಗಳು ಪ್ರವೇಶ ಪಡೆಯಲಿವೆ. 8ನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗಿನ ವಿದ್ಯಾರ್ಥಿಗಳಿಗೆ ಸ್ಪರ್ಧೆಯಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಲಾಗಿತ್ತು.

ಪ್ರಾದೇಶಿಕ ಸ್ಪರ್ಧೆಯು ಬೆಂಗಳೂರು ಸೇರಿದಂತೆ ಹೈದರಾಬಾದ್, ಅಹಮದಾಬಾದ್, ಚೆನ್ನೈ, ಕೊಯಮತ್ತೂರು, ಪುಣೆ, ಕೋಲ್ಕತ್ತಾ, ಭುವನೇಶ್ವರ್, ಕೊಚ್ಚಿ, ಲಕ್ನೋ, ದೆಹಲಿ ಮತ್ತು ಮುಂಬೈ ನಗರಗಳಲ್ಲಿ ನಡೆದಿದ್ದು, ರಾಷ್ಟ್ರಾದ್ಯಂತ ಸುಮಾರು 2 ಲಕ್ಷ ವಿದ್ಯಾರ್ಥಿಗಳನ್ನು ತಲುಪಿದೆ ಎಂದು ಅಂದಾಜಿಸಲಾಗಿದೆ.

ಟಿಸಿಎಸ್ ವ್ಯವಸ್ಥಾಪಕ ನಿರ್ದೇಶಕ ಎನ್. ಚಂದ್ರಶೇಖರನ್, ಫೈನಾನ್ಷಿಯಲ್ ಸಲ್ಯೂಷನ್ಸ್ ಅಧ್ಯಕ್ಷ ಎನ್. ಗಣಪತಿ ಸುಬ್ರಮಣ್ಯಂ, ಉಪಾಧ್ಯಕ್ಷ ನಾಗರಾಜ್ ಇಜಾರಿ ಉಪಸ್ಥಿತರಿದ್ದರು. ಗಿರಿ ಬಾಲಸುಬ್ರಹ್ಮಣ್ಯಂ ಕಾರ್ಯಕ್ರಮ ನಿರೂಪಿಸಿದರು.